**ಓ.ಎಸ್. ನಂ. 503/2015 ಪಿ.ಡಬ್ಲೂ-1 ಹೆಸರು - ಲಕ್ಷ್ಮೀ**

**ಸಾಕ್ಷಿಯನ್ನು ದಿನಾಂಕಃ 20.04.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮು. ಪಾಟೀ ಸವಾಲುಃ ಶ್ರೀ. ಕೆ ಎಂ ಕೆ ವಕೀಲರಿಂದಃ-**

1 ನೇ ಪ್ರತಿವಾದಿ ನನ್ನ ಮತ್ತು ಇತರರ ವಿರುದ್ಧ ವಿಭಾಗ ಕೋರಿ ನಂಜನಗೂಡಿನ ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 37/2022 ರಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಚಿಕ್ಕಮ್ಮರವರನ್ನು ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಾದಿಗಳಾದ ನಮ್ಮ ವಿರುದ್ಧ ವಿಭಾಗ ಕೋರಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತವರು ಮನೆ ಹುಲ್ಲಹಳ್ಳಿಯಲ್ಲಿದೆ. ನಾನು ಚಿಕ್ಕವಳದಾಗಿನಿಂದಲೂ ನನ್ನ ಮಾವನಾದ ಮಲ್ಲನಾಯಕರವರ ಮನೆಯಲ್ಲಿಯೇ ಕೆಲಸ ಮಾಡಿಕೊಂಡು ಇದ್ದೆನು ಎಂದರೆ ಸಾಕ್ಷಿ ನಾನು ಮಲ್ಲನಾಯಕರವರ ಮೊಮ್ಮಗಳಾಗಿದ್ದು, ಹಾಗಾಗಿ ನಾನು ನನ್ನ ತಾತನ ಮನೆಯಲ್ಲಿದ್ದೆ ಎಂದು ಹೇಳುತ್ತಾರೆ. ನನ್ನ ಮದುವೆಯ ನಂತರ ನನ್ನ ಪತಿ ಹಾಗೂ ಆತನ ಸಹೋದರರು ಬೇರೆ ಬೇರೆಯಾಗಿದ್ದಾರೆ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದ್ದು ಸದರಿ ಸ್ವತ್ತುಗಳಲ್ಲಿ ನಮಗೆ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆಯನ್ನು ನೀಡಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿ ಪರ ವಕೀಲರ ಮನವಿಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**